**OS No. 72/2023**
**ಡಿ.ಡಬ್ಲ್ಯೂಃ 1**

**ದಿನಾಂಕ 26-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲು ವಾದಿಯ ಪರ: ಶ್ರೀ ಎನ್. ಆರ್. ಕೆ ವಕೀಲರಿಂದಃ</u>**

1. ನಾನು ಸರ್ವೆ ನಂಬರ 400 ಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ಖಾಸರಾ ಪಹಣಿ ಮತ್ತು ಕೈ ಬರಹ ಪಹಣಿ, ನಿಜಾಮ ಪಾವತಿ, ಪಟ್ಟಾ ಬುಕ್ಕು, ಹಾಕಿರುತ್ತೇನೆ. ಸದರಿ ಪಹಣಿಯಲ್ಲಿ ನಾವು ಮಾಲೀಕರು ಇರುವುದಿಲ್ಲ ಎಂದು ಇರುತ್ತದೆ ಎಂದರೆ ಸರಿಯಲ್ಲ. ಜಮೀನ ಸರ್ವೆ ನಂಬರ 400 ಇದು ಕ್ಷೇತ್ರ 18 ಎಕರೆ 18 ಗುಂಟೆ ಇದೆ. ಸದರಿ ಜಮೀನ ಸರ್ವೆ ನಂಬರ 400 ರಲ್ಲಿ ಎರಡು ಹಿಸ್ಸೆ ಇವೆ.

2. ನನ್ನ ತಂದೆ ಜಮೀನ ಸರ್ವೆ ನಂಬರ 400/2 ಕ್ಕೆ ಸಂಬಂಧಪಟ್ಟಂತೆ ಜಯಂತ ಬಸವರಾಜ ಇವರ ವಿರುದ್ಧ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಜಮೀನ ಸರ್ವೆ ನಂಬರ 400/2 ಕ್ಕೆ ಸಂಬಂಧಪಟ್ಟಂತೆ ವಿಶ್ವನಾಥ ಮತ್ತು ಕಾಶಿನಾಥ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಜಮೀನ ಸರ್ವೆ ನಂಬರ 400/2 ಕ್ಕೆ ಯಾವುದೇ ಸಂಬಂಧವಿರುವುದಿಲ್ಲ ಎಂದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದವರು ಆದೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ಎಲ್ಲಿಯೂ ಪ್ರಶ್ನಿಸಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಜಮೀನ ಸರ್ವೆ ನಂಬರ 400 ಇದು ಚಿತ್ತಾಪೂರ ರಸ್ತೆಯ ಕಡೆಗೆ ಬರುತ್ತದೆ. ಜಮೀನ ಸರ್ವೆ ನಂಬರ 398, 399, 400 ಇವು ಎಲ್ಲಾ ಕೃಷಿ ಜಮೀನುಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಜಮೀನ ಸರ್ವೆ ನಂಬರ 398, 399, 400 ಇವು ಸ್ವತಂತ್ರ ಸಿಗುವುದಕ್ಕಿಂತ ಮುಂಚೆ ನಿಜಾಮರು ಇಂಡಸ್ಟ್ರಿಜ್ ಗೋಸ್ಕರ ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸ್ವಾಧೀನಕ್ಕೆ ಪರಿಹಾರ ನೀಡುತ್ತಾರೆ ಎಂದರೆ ಸಾಕ್ಷಿಯು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಜಮೀನ ಸರ್ವೆ ನಂಬರ 398, 399, 400 ಇಂಡಸ್ಟ್ರಿಜ್ ಪ್ಲಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಜಮೀನ ಸರ್ವೆ ನಂಬರ 398, 399, 400 ಇವು ಇಂಡಸ್ಟ್ರಿಜ್ ಪ್ಲಾಟ ಎ ಮತ್ತು ಬಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದರ

ವಿಸ್ತೀರ್ಣ 800 x 3 ಇರುತ್ತದೆ ಎಂದರೆ ಸರಿಯಲ್ಲ. ಸದರಿ ಸರಕಾರದವರು ರವಿ ಶಂಕರ ಇವರಿಗೆ ಇಂಡಸ್ಟ್ರೀಜ್  ಎ ಭಾಗವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ರವಿ ಶಂಕರ ಇವರು ಆಯಿಲ್ ಮಿಎಲ್ ನ್ನು ನಡೆಸುತ್ತಾರೆ ಎಂದರೆ ಸರಿಯಲ್ಲ. ಸನಃ 1950 ರಲ್ಲಿ ಭೀಮಾನದಿಯ ಪ್ರವಾಹಕ್ಕೆ ಇಂಡಸ್ಟ್ರೀಜ್  ಬಂದ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಆಗಿರಬಹುದು ಎಂದು ನುಡಿಯುತ್ತಾರೆ. ಸದರಿ ರವಿ ಶಂಕರ ಈತನು ಅಕ್ಕನಾಗಮ್ಮ ಇವರಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಖರೀದಿ ಮಾಡಿದ ದಿನದಿಂದ ಅಕ್ಕನಾಗಮ್ಮ ಮಾಲೀಕ ಮತ್ತು ಕಬ್ಜೆದಾರಳು ಇದ್ದಳು ಎಂದರೆ ಸರಿಯಲ್ಲ. ಸದರಿ ಅಕ್ಕನಾಗಮ್ಮ ಇವಳು ವಾದಿಯರ ಅಜ್ಜಿ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಅಕ್ಕನಾಗಮ್ಮ ಇವಳು ದಾವಾ ಆಸ್ತಿಯನ್ನು ಅನ್ನಪೂರ್ಣಮ್ಮ (ವಾದಿಯರ ತಾಯಿ)ಗೆ ದಾನ ಮಾಡಿರುತ್ತಾಳೆ ಎಂದರೆ ಸರಿಯಲ್ಲ.  ಸದರಿ ಅನ್ನಪೂರ್ಣಮ್ಮ ಮಾಲೀಕಳು ಇರುತ್ತಾಳೆ ಎಂದರೆ ಸರಿಯಲ್ಲ. ಅನ್ನಪೂರ್ಣಮ್ಮ ಇವಳು ವಾದಿಯರಿಗೆ ದಾನ ಪತ್ರದ ಮೂಲಕ ದಾವಾ ಆಸ್ತಿಯನ್ನು ನೀಡಿರುತ್ತಾಳೆ ಎಂದರೆ ಸರಿಯಲ್ಲ. ಸದರಿ ಮುನ್ಸಿಪಾಲಿಟಿ ದಾಖಲೆಯಲ್ಲಿ ವಾದಿಯರು ಹೆಸರು ನಮೂದು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಮುನ್ಸಿಪಾಲಿಟಿಯವರು ಸ್ಥಳ ಪರಿಶೀಲನೆ ಮಾಡಿ ದಾಖಲೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಾದಿಯರಿಗೆ ಮುನ್ಸಿಪಾಲಿಟಿ ಸಂಖ್ಯೆಯನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

3. ಗೌರಮ್ಮ ನನ್ನ ತಾಯಿ. ಸದರಿ ನನ್ನ ತಾಯಿ ಡಿ.ಸಿ ಯಾದಗಿರಿ ಇವರಿಗೆ ಸುಳ್ಳು ಮಾಹಿತಿ ನೀಡಿ ಅರ್ಜಿ ನೀಡಿದ್ದಳು ಎಂದರೆ ಸರಿಯಲ್ಲ. ಡಿ.ಸಿ ಯಾದಗಿರಿ ಇವರ ಆದೇಶದ ಪ್ರಕಾರ ಜಮೀನ ಸರ್ವೆ ನಂಬರ 400 ಕ್ಕೆ ನನ್ನ ತಾಯಿಯ ಹೆಸರು ಸೇರಿಸಲು ಹೇಳಿರುತ್ತಾರೆ. ಸದರಿ ಡಿ.ಸಿ ಯಾದಗಿರಿ ಇವರ ಆದೇಶದ ವಿರುದ್ದ ವಾದಿ ನಂಬರ 1 ರವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಸದರಿ ಡಿ.ಸಿ ಆದೇಶವನ್ನು ವಜಾ ಮಾಡಿ ಮತ್ತೊಮ್ಮೆ ಪುನರ್ವಿಚಾರಣೆ ಮಾಡಲು ನಿರ್ದೇಶನ ನೀಡಿರುತ್ತಾರೆ ಎಂದರೆ ಸರಿ. ಎರಡನೆ ಬಾರಿ ವಿಚಾರಣೆ ಆದ ನಂತರ ನನ್ನ ತಾಯಿಗೆ ಮತ್ತು ಜಮಿನಿಗೆ ಯಾವುದೇ ಸಂಬಂಧವಿರುವುದಿಲ್ಲ ಎಂದು ಆದೇಶ ಮಾಡಿರುತ್ತಾರೆ ಎಂದರೆ ಸರಿ. ನಮಗೂ ಮತ್ತು ದಾವಾ ಆಸ್ತಿಗೂ ಯಾವುದೇ

ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಯು ಅಸ್ತಿತ್ವದಲ್ಲಿ ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುನ್ಸಿಪಾಲಿಟಿಯವರು ಪರಿಶೀಲನೆ ಮಾಡಿ ನಂಬರ ನೀಡಿರುತ್ತಾರೆ ಎಂದರೆ ಸಾಕ್ಷಿಯು ದಾವಾ ಆಸ್ತಿಯು ಕೃಷಿಯೇತರ ಜಮೀನು ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಗೆ ಮಾಲೀಕನಿರುತ್ತೇನೆ ಎಂದು ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ**